ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.4732/2023

ಪಿ.ಡಬ್ಲ್ಯೂ -08
ಸಿ.ಡಬ್ಲ್ಯೂ-09

ಸಾಕ್ಷಿದಾರನ ಹೆಸರುಃ- ಜಿ.ವಿ. ತಿರುಮಲೆಗೌಡ
ತಂದೆಯ ಹೆಸರುಃ- ವೆಂಕಟರಾಮೆಗೌಡ
ವಯಸ್ಸುಃ- 61 ವರ್ಷ
ಉದ್ಯೋಗಃ- ನಿವೃತ್ತ ಮುಖ್ಯ ಪೇದೆ
ವಾಸಃ- ಗವಿಮಠ ಕುಣಿಗಲ್ ತಾಲ್ಲೂಕು

**ಸಾಕ್ಷಿಗೆ ದಿಃ 21.04.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ 29.07.2019 ರಂದು ಸಂಜೆ 4 ರ ಸಮಯದಲ್ಲಿ ಕುಣಿಗಲ್ ತಾಲ್ಲೂಕು ಬೀರಗಾನಹಳ್ಳಿಯಲ್ಲಿ ಚಾಸಾ 2, 8 ಮತ್ತು 10 ಅವರು ಗಸ್ತಿನಲ್ಲಿದ್ದಾಗ ಆಗ ಕರ್ನಾಟಕ ಲೋಕಾಯುಕ್ತ ಇನ್ಸಪೇಕ್ಟರ ತುಮಕೂರು ಅವರು ದೂರು ಬಂದ ಬಗ್ಗೆ ಬೀರಗಾನಹಳ್ಳಿ ಸ್ಥಳಕ್ಕೆ ಬಂದಿರುತ್ತಾರೆ. ನಂತರ ನಾವು ಕುಣಿಗಲ್ ಬಂದು ಅಲ್ಲಿಂದ ಗವಿಮಠ, ಹಿಪ್ಪಾಡಿ ಮಾರ್ಗವಾಗಿ ತಾವರೆಕೆರೆಗೆ ಬಂದಿರುತ್ತೇವೆ. ಸರ್ಕಾರಿ ಶಾಲೆಯ ಬಳಿ ಇದ್ದ ಜನರನ್ನು ಅಕ್ರಮ ಮದ್ಯ ಮಾರಾಟ ಬಗ್ಗೆ ಮಾಹಿತಿ ತಿಳಿಸಿ ದಾಳಿಗೆ ಸಹಕರಿಸುವಂತೆ ಕೋರಲಾಯಿತು ಅವರು ಒಪ್ಪಿ ನಮ ಜೊತೆ ಬಂದಿರುತ್ತಾರೆ. ನಂತರ ನಾವು ಹೊನ್ನೆಗೌಡನದೊಡ್ಡಿ ಕ್ರಾಸ್ ಬಳಿ ಇರುವ ಪೆಟಿ ಅಂಗಡಿಗೆ ಬಂದಿದ್ದು ನಂತರ ಅಲ್ಲಿ ವಿಚಾರಿಸಿ ನ್ಯಾಯಾಲಯದಿಂದ ಶೋದನಾ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಶೋದನಾ ವಾರೆಂಟ್ ಅನ್ನು ಸ್ಥಳದಲ್ಲಿ ತಯಾರಿಸಿ ನಮ್ಮ ಅಧಿಕಾರಿಗಳ ಸಹಿಯನ್ನು ಮಾಡಿಸಿ ಪರಸ್ಪರ ಅಂಗ ಶೋದನೆ ಮಾಡಿಕೊಂಡು ಪೆಟಿ ಅಂಗಡಿಯನ್ನು ಪ್ರವೇಶಿಸಿರುತ್ತೇವೆ. ಅಂಗಡಿಯಲ್ಲಿ ಮರದ ಶೋಕೇಷ ಮೇಲೆ ಒಂದು ಬಿಳಿ ಬಣ್ಣದ ಕವರ್ ಅದ್ದು ಅದನ್ನು ತೆರೆದು ನೋಡಲಾಗಿ ಕವರನಲ್ಲಿ 180 ಎಂ.ಎಲ್ ನ 2

8ಪಿಎಂ. ವಿಸ್ಕಿಯ ಪ್ಯಾಕೇಟ್ ಮತ್ತು 90 ಎಂ.ಎಲ್ ನ 2 ಓಟಿ ವಿಸ್ಕಿಯ ಪ್ಯಾಕೇಟಗಳು, 90 ಎಂ.ಎಲ್ ನ 4 ಎಂ.ಸಿ ವಿಸ್ಕಿ ಪ್ಯಾಕೇಟ್ ಇದ್ದು ಫ್ರಿಜ್ಡ ಮೇಲೆ 500 ಎಂ.ಎಲ್ ನ 1 ಮತ್ತು 330 ಎಂ.ಎಲ್ 2 ಕಿಂಗ್ ಫಿಷರ್ stong ಪ್ರೇಮಿಯಂ ಬಿಯರ್ ಟಿನ್ ಗಳು ದೊರೆತಿರುತ್ತೇವೆ. ನಂತರ ಸ್ಥಳದಲ್ಲಿ ದೊರೆತ ಎಲ್ಲಾ ಮದ್ಯವನ್ನು ಬಿಳಿ ಬಣ್ಣದ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿ ಇಲಾಖಾ ಸೀಲ್ ಸಂ 157 ಅನ್ನು ಹಾಕಲಾಯಿತು. ನಂತರ ಮಾದರಿ ಸಹಿ ಮತ್ತು ಮಾದರಿ ಸೀಲಿನ ನಕಲು ತಯಾರಿಸಿ ಅವುಗಳನ್ನು ಮು. ಮಾ. ಗಳಿಗೆ ಅಂಟಿಸಲಾಯಿತು. ಸದರಿ ವ್ಯಕ್ತಿಯ ಹೆಸರು ಕೇಳಲಾಗಿ ಸೋಮಶೇಖರ ಬಿನ್ ರಾಮಣ್ಣ ಎಂದು ತಿಳಿಸಿರುತ್ತಾರೆ. ಅಕ್ರಮ ಮದ್ಯ ಹೊಂದಲು ಮತ್ತು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆ. ನಂತರ ಹು.ದುರ್ಗದಿಂದ ಮು. ಮಾ. ಅನ್ನು ತಂದಿರುವುದಾಗಿ ಹೇಳಿರುತ್ತಾನೆ. ನಂತರ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಮದ್ಯವನ್ನು ಹೊಂದುವುದು ಮತ್ತು ಸಾಗಾಟ ಮಾಡುವುದು ಹೊಂದುವುದು ಕರ್ನಾಟಕ ಅಭಕಾರಿ ಕಾಯ್ದೆಯ ಅಡಿಯಲ್ಲಿ ಅಪರಾದವೆಂದು ತಿಳಿಸಿರುತ್ತೇವೆ.

ನಂತರ ಸ್ದಳದಲ್ಲಿ ಮಹಜರನ್ನು ತಯಾರಿಸಿ ಪಂಚರ ಸಹಿ ಪಡೆದು ಆರೋಪಿಯನ್ನು ನಮ್ಮ ವಶಕ್ಕೆ ಪಡೆದು ಪ್ರಕರಣದ ದಾಖಲಿಸಿ ನಂತರ ನ್ಯಾಯಾಲಯಕ್ಕೆ ಹಾಜರುಪಡಿಸುವುದಾಗಿ ಹೇಳಿರುತ್ತೇವೆ. ಮಹಜರನ್ನು ಸಂಜೆ 6.40 ರಿಂದ 7.40 ಗಂಟೆಯವರೆಗೆ ಮಾಡಿ ಮುಗಿಸಲಾಯಿತು. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿಪಿ 1(ಜಿ) ಎಂದು ಗುರುತಿಸಲಾಯಿತು. ಆರೋಪಿ ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ನಾನು ನನ್ನ ಹೇಳಿಕೆ ನೀಡಿರುತ್ತೇನೆ.

**ಆರೋಪಿ ಪರಃ ಪಾಟೀ ಸವಾಲುಃ ಜಿ.ಎ.ಆರ್. ವಕೀಲರಿಂದಃ**

ದಿಃ 29.07.2019 ರಂದು ನಾವು ಯಡಿಯೂರು ಹೋಬಳಿಯಲ್ಲಿ ಗಸ್ತು ಮಾಡುತ್ತಿದ್ದು ಚಾಸಾ 1 ಅವರು ಬೀರಗಾನಹಳ್ಳಿಗೆ ಬಂದಿರುತ್ತಾರೆ. ಅವರ ಜೊತೆ ಚಾಸಾ 5 ಮತ್ತು 6 ಸಹ ಬಂದಿರುತ್ತಾರೆ.

ನಾವು ನಮ್ಮ ಕಚೇರಿಗೆ ಬಂದು ಹೋಗಿರುತ್ತೇವೆ ಆದರೆ ಕಚೇರಿಯಲ್ಲಿ ಎಫ್.ಐ.ಆರ್ ದಾಖಲು ಮಾಡಿರುವುದಿಲ್ಲ. ನಾವು ಕುಣಿಗಲ್ ನಿಂದ ಗವಿಮಠ ಇಪ್ಪಾಡಿ ಚೌಡನಕೊಪ್ಪೆ ಮಾರ್ಗವಾಗಿ ಹೊನ್ನೆಗೌಡನದೊಡ್ಡಿಗೆ ಹೋಗಿರುತ್ತೇವೆ. ಪಂಚರನ್ನು ತಾವರೆಕೆರೆ ಗ್ರಾಮಕ್ಕೆ ಹೋಗಿ ನಮ್ಮ ಜೊತೆ ಕರೆದುಕೊಂಡು ಹೋಗಿರುತ್ತೇವೆ. ಚೌಡನಕೊಪ್ಪೆ ಮಾರ್ಗವಾಗಿ ಹೊನ್ನೆಗೌಡನದೊಡ್ಡಿಗೆ ಹೋಗುವಾಗ ಹೊನ್ನೆಗೌಡನದೊಡ್ಡಿಗೆ ಹೋಗುವ ಮೊದಲು ಬರುವ ಗ್ರಾಮದ ಹೆಸರು ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಹೊನ್ನೆಗೌಡನದೊಡ್ಡಿಯಲ್ಲಿ ಜನ ವಾಸ ಮಾಡುತ್ತಾರೆ ಅವರನ್ನು ವಿಚಾರಣೆ ಮಾಡಿದ್ದಿರಾ ಎಂದರೆ ಸಾಕ್ಷಿ ಅವರು ಯಾರು ಸಹಿ ಮಾಡುವುದಿಲ್ಲವೆಂದು ಹೇಳುತ್ತಾರೆ ಸದರ ವಿಚಾರವನ್ನು ಮಹಜರನಲ್ಲಿ ಬರೆದಿರುವುದಿಲ್ಲ.

ಪೆಟ್ಟಿ ಅಂಗಡಿಯ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಪೆಟ್ಟಿ ಅಂಗಡಿಯಲ್ಲಿ 4-5 ಜನ ಒಳಗೆ ಹೋಗಬಹುದು ನಾವು ಸಹ ಅಂಗಡಿಯ ಒಳಗಡೆ ಹೋಗಿರುತ್ತೇವೆ. ಪೆಟ್ಟಿ ಅಂಗಡಿಯಲ್ಲಿ ದಿನಸೀ ಸಾಮಗ್ರಿಗಳು ಇರಲಿಲ್ಲ ಇತರೆ ವಸ್ತುಗಳು ಇದ್ದವು ಅವು ಮಹಜರನಲ್ಲಿ ಬರೆದಿರುತ್ತೇವೆ. ನಾವು ಜಪ್ತು ಮಾಡುವ ಸಮಯದಲ್ಲಿ ಹೈ ವೊರ್ಡ್ಸ್ ಪಂಚ ಸಿಕ್ಕಿರುವುದಿಲ್ಲ. ನ್ಯಾಯಾಲಯದ ಮುಂದೆ ಹೈ ವೊರ್ಡ್ಸ್ ಪಂಚ ಇರುತ್ತದೆ ಎಂದರೆ ಸರಿ. ಸದರಿ ಹೈ ವೊರ್ಡ್ಸ್ ಪಂಚ ಸ್ಥಳದಲ್ಲಿ ಸಿಕ್ಕಿರುತ್ತದೆ ಎಂದರೆ ಸಾಕ್ಷಿ ಅಂಗಡಿಯ ಮುಂದೆ ಸುಮಾರು ಕಂಪನಿಯ 30 ರಿಂದ 40 ಮದ್ಯದ ಪ್ಯಾಕೇಟಗಳು ಬಿದಿದ್ದವು ಎಂದು ಹೇಳುತ್ತಾರೆ. ಅವುಗಳನ್ನು ನಾವು ಜಪ್ತು ಮಾಡಿರುವುದಿಲ್ಲ. ಹೈ ವೊರ್ಡ್ಸ್ ಪಂಚಅನ್ನು ಸಹ ನಾವು ಜಪ್ತು ಮಾಡಿರುವುದಿಲ್ಲ.

ಸಾಮಾನ್ಯವಾಗಿ ಮು. ಮಾ. ಗಳಂತಹ ವಸ್ತುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು. ಮಾ. ಗಳು ಸಿಗುವುದಿಲ್ಲವೆಂದು ಹೇಳುತ್ತಾರೆ. ಅಂಗಡಿಯ ಮುಂಬಾಗ ಕಲ್ಲಿನ ಕುಳಿತುಕೊಳ್ಳುವ ಆಸನ ಇರುತ್ತದೆ. ನಾವು ಹೋದಾಗ ಸ್ಥಳದಲ್ಲಿ ಗ್ರಾಹಕರು ಸೇರಿದ್ದು ನಮ್ಮನ್ನು ನೋಡಿ ಅವರು ಓಡಿ ಹೋಗಿರುತ್ತಾರೆಂದು ಹೇಳುತ್ತಾರೆ. ಸದರಿ ಪೆಟ್ಟಿ ಅಂಗಡಿಯ ಚಕ್ಕುಬಂದಿ ಪೂರ್ವಕ್ಕೆ ಹೊನ್ನೆಗೌಡನದೊಡ್ಡಿ ಕೆಂಪನಹಳ್ಳಿ ರಸ್ತೆ, ಪಶ್ಚಿಮಕ್ಕೆ ರಸ್ತೆ ಇರುತ್ತದೆ ಉತ್ತರಕ್ಕೆ ಬೋರೆಗೌಡ ಅವರಿಗೆ ಸೇರಿದ

ಅಂಗಡಿ ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ಚಕ್ಕುಬಂದಿಯನ್ನು ಆರೋಪಿ ಹೇಳಿರುತ್ತಾರೆ. ಬೋರೆಗೌಡಅವರನ್ನು ನಮ್ಮ ಅಧಿಕಾರಿಗಳು ಕರೆದಿರುವುದಿಲ್ಲ ಕಾರಣ ಅವರು ಇರಲಿಲ್ಲವೆಂದು ಹೇಳುತ್ತಾರೆ. ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇರುವುದಿಲ್ಲ ಚಾಸಾ 1 ಮತ್ತು ಅವರ ಸಿಬ್ಬಂದಿ ಬೀರಗಾನಹಳ್ಳಿಗೆ ಬಂದಿಲ್ಲ ನಾವು ದಾಳಿಗೆ ಹೋಗಿಲ್ಲ ಮು. ಮಾ. ಗಳನ್ನು ಜಪ್ತು ಮಾಡಿಲ್ಲವೆಂದರೆ ಸರಿಯಲ್ಲ. ಮಹಜರನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಹಜರನ್ನು ಚಾಸಾ 1 ಅವರ ಹೇಳಿಕೆ ಮೇರೆಗೆ ಚಾಸಾ 2 ಅವರು ಬರೆದಿರುತ್ತಾರೆ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಮು. ಮಾ. ಗೂ ಯಾವುದೇ ಸಂಬಂದ ಇರುವುದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್**